ಕರ್ನಾಟಕ ಸರ್ಕಾರ
ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ
E-mail ID: icpssarakar@gmail.com Ph.No.080-22879382

ಸಂಖ್ಯೆ: ಕರಾಸಮಮಸ/ದತ್ತು-14/2018-19

ದಿನಾಂಕ:21.08.2018

# ಸುತ್ತೋಲೆ

ವಿಷಯ: ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ (CARA) ರವರಿಗೆ ವಿಶೇಷ ಸಂದರ್ಭಗಳಲ್ಲಿ ದತ್ತು ಪೂರ್ವ ಪೋಷಕರ ವಯೋಮಿತಿ ಸಡಿಲಿಕೆ (Relaxation) ನೀಡುವ ಅಧಿಕಾರದ ಬಗ್ಗೆ

* * * *

ದತ್ತು ನಿಯಂತ್ರಣ 2017ರ ನಿಯಮಾವಳಿ 60(2)ರಲ್ಲಿನ ಅವಕಾಶದನ್ವಯ ವಿಶೇಷ ಸಂದರ್ಭದಲ್ಲಿ ವಯೋಮಿತಿ ಸಡಿಲಿಕೆ Relaxation ಸಮಿತಿಯನ್ನು ರಚಿಸಲಾಗಿದೆ.

ಮುಂದುವರೆದು 30ನೇ ಆಗಸ್ಟ್ 2016 ರಂದು ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ (CARA) ನಡೆಸಿದ ಸ್ಟೀರಿಂಗ್ ಸಮಿತಿ ಸಭೆಯಲ್ಲಿ ಈ ಮುಂದಿನ ಪ್ರಕರಣಗಳನ್ನು ನಿರ್ಧರಿಸುವ ಜವಾಬ್ದಾರಿಯನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ ರವರಿಗೆ ವಹಿಸಿರುತ್ತದೆ. ಅದರಂತೆ

1. ತಾಯಿ ತಂದೆಯರು, ತಮ್ಮ ಮಕ್ಕಳನ್ನು ಖಾಯಿಲೆ ಅಥವಾ ಅಪಘಾತದ ಮೂಲಕ ಕಳೆದುಕೊಂಡಿದ್ದಲ್ಲಿ, ಈ ಘಟನೆಯು ಪೋಷಕರ ನಿರ್ಲಕ್ಷ್ಯತೆಯಿಂದ ಉಂಟಾಗಿಲ್ಲವಾದಲ್ಲಿ ಹಾಗೂ ಇಂತಹ ಪೋಷಕರಿಗೆ ಬೇರೆ ಜೀವಂತ ಮಕ್ಕಳು ಇಲ್ಲವಾದಲ್ಲಿ, ಅವರುಗಳು ದತ್ತು ಪಡೆಯಲು ಬಯಸಿದಲ್ಲಿ ತಕ್ಷಣ ಅವರ ಗೃಹ ಅಧ್ಯಯನ ವರದಿಯನ್ನು ಅಪ್‌ಲೋಡ್ ಮಾಡಲು ಕ್ರಮವಹಿಸುವುದು. ಅನಂತರ ಆ ಪೋಷಕರ ಆಯ್ಕೆ ಹಾಗೂ ಅರ್ಹತೆಯ ಮಾಹಿತಿಯನ್ನು ಆಧರಿಸಿ ಮಗುವನ್ನು refer ಮಾಡಲು ಕ್ರಮ ವಹಿಸಲಾಗುವುದು.
2. ತಾಯಿ ತಂದೆಯರು, ತಮ್ಮ ಮಕ್ಕಳನ್ನು ಖಾಯಿಲೆ ಅಥವಾ ಅಪಘಾತದ ಮೂಲಕ ಕಳೆದುಕೊಂಡಿದ್ದಲ್ಲಿ, ಈ ಘಟನೆಯು ಪೋಷಕರ ನಿರ್ಲಕ್ಷ್ಯತೆಯಿಂದ ಉಂಟಾಗಿಲ್ಲವಾದಲ್ಲಿ ಹಾಗೂ ಇಂತಹ ಪೋಷಕರಿಗೆ ಬೇರೆ ಜೀವಂತ ಮಕ್ಕಳು ಇಲ್ಲವಾದಲ್ಲಿ, ಅವರ ಜೇಷ್ಠತೆಯನ್ನು ಆರು ತಿಂಗಳು ಪೂರ್ವಭಾವಿಯಾಗಿ ನಿಗದಿಗೊಳಿಸಬಹುದು.
3. ಒಡಹುಟ್ಟಿದ ಹಿರಿಯ ಮಕ್ಕಳು ಅಥವಾ ವಿಶೇಷ ಅಗತ್ಯತೆಯುಳ್ಳ ಮಕ್ಕಳನ್ನು ದತ್ತು ನೀಡುವ ಸಂದರ್ಭದಲ್ಲಿ ದತ್ತು ಪೂರ್ವ ಪೋಷಕರಿಗೆ ಈಗಿರುವ ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರದ ಮಾರ್ಗಸೂಚಿಯನ್ವಯ ನಿಗದಿಯಾಗಿರುವ ಕನಿಷ್ಠ ಮತ್ತು ಗರಿಷ್ಠ ವಯೋಮಾನದ ಮಿತಿಯನ್ನು ಪ್ರಕರಣಕ್ಕನುಗುಣವಾಗಿ ಸಡಿಲಗೊಳಿಸುವ ಕ್ರಮ ವಹಿಸುವುದು.

ಆದ್ದರಿಂದ ಇನ್ನು ಮುಂದೆ ಈ ರೀತಿಯ ಪ್ರಕರಣಗಳು ತಮ್ಮ ಹಂತದಲ್ಲಿ ಕಂಡುಬಂದಲ್ಲಿ ಅಂತಹ ಸಂದರ್ಭಗಳಲ್ಲಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ ರವರಿಗೆ ಪತ್ರ ಬರೆದು ಪ್ರತಿಯನ್ನು ಪ್ರಧಾನ ಕಛೇರಿಗೆ ಸಲ್ಲಿಸುವುದು.

ಸದಸ್ಯ ಕಾರ್ಯದರ್ಶಿಗಳು,
ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ
ಸೊಸೈಟಿ, ಬೆಂಗಳೂರು.

ಪ್ರತಿಯನ್ನು:

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು.
2) ಎಲ್ಲಾ ಜಿಲ್ಲೆಗಳ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ.
3) ಎಲ್ಲಾ ವಿಶೇಷ ದತ್ತು ಸಂಸ್ಥೆಗಳ ಮುಖ್ಯಸ್ಥರುಗಳಿಗೆ

Scanned by CamScanner